ಬಹುಶಃ ನಾವು ಚಿಕ್ಕವರಿದ್ದಾಗ ಸರಿಯಾದ ಅಳತೆಯ ಬಟ್ಟೆ ಹಾಕಿದ್ದೇ ಕಡಿಮೆ ಎನ್ನಬೇಕು. ಬೆಳೆಯುವ ಮಕ್ಕಳು, ಬೆಳೆಯುವ ಮಕ್ಕಳು ಎನ್ನುತ್ತಾ ನಮ್ಮ ಎತ್ತರಕ್ಕಿಂತ ಅರ್ಧ ಅಡಿ ಉದ್ದ ಲಂಗ, ಜೊತೆಗೆ ಒಳಗೆ ಎರಡಿಂಚು ಮಡಚಿ ಹೊಲಿಸುತ್ತಿದ್ದುದು ಇತ್ತು. ಗಂಡುಹುಡುಗರದೂ ಇದಕ್ಕಿಂತಾ ಪರಿಸ್ಥಿತಿ ಭಿನ್ನವೇನಿರಲಿಲ್ಲ. ಪ್ಯಾಂಟುಗಳನ್ನಂತೂ ಎರಡು ತಲೆಮಾರು ಹಾಕಿಕೊಳ್ಳುತ್ತಾರೇನೋ ಎನ್ನುವ ರೇಂಜಿಗೆ ಅವರ ಅಳತೆಗಿಂತಾ ನಾಲ್ಕಿಂಚು ಉದ್ದ, ಸೊಂಟವನ್ನೂ ಎರಡಿಂಚು ಸಡಿಲ ಇಡಿಸಿ ಹೊಲಿಸುತ್ತಿದ್ದರು. ಸೊಂಟ–ಕಾಲು ಎರಡನ್ನೂ ಬ್ಯಾಲೆನ್ಸ್ ಮಾಡಿಕೊಳ್ಳುತ್ತಲೇ ಓಡಾಡಬೇಕಿತ್ತು. ಕಾಲಿನ ಕೆಳಗೆ ಮಡಚಿ ಮಡಚಿ ಅವು ಅಲ್ಲಿಯೇ ಕತ್ತರಿಸಿ ಹೋಗಿ ಮೂಲೆ ಸೇರುತ್ತಿದ್ದವು. ಒಟ್ಟಿನಲ್ಲಿ ಮಂಡಿ, ಕುಂಡಿ ಕಿತ್ತು ಹೋಗುವ ತನಕವೂ ಪ್ಯಾಂಟುಗಳ ಆಯಸ್ಸು ಗಟ್ಟಿ ಇರುತ್ತಿತ್ತು ಎನ್ನಿ.

ಹಳೆಯ ಕಾಲದಲ್ಲೆಲ್ಲ ಗಂಡುಹುಡುಗರ ಪ್ಯಾಂಟುಗಳು ಹರಿದಿದ್ದರೆ ಮನೆಯ ಹಿರಿಯರು 'ಇಂಥವೆಲ್ಲ ಹಾಕಿಕೊಂಡರೆ ಮನೆಯಲ್ಲಿ ದರಿದ್ರ ಸುತ್ತಿಕೊಳ್ಳುತ್ತದೆ' ಅಂತಾ ಬೈಯ್ದು ಟೈಲರ್ ಹತ್ತಿರ ಒಯ್ದು ಹೊಲಿಗೆ ಹಾಕಿಸುವುದೋ, ಅದರದ್ದೇ ಬಣ್ಣದ ದಾರದಿಂದ ಡಾರ್ನಿಂಗ್ ಮಾಡಿಸುವುದೋ ಮಾಡುತ್ತಿದ್ದರು. ಹೊಸ ಪ್ಯಾಂಟು ಕೊಡಿಸಬಹುದು ಎಂದು ಊಹೆ ಮಾಡುವ ಹಾಗಿರಲಿಲ್ಲ ಆ ಕಾಲದಲ್ಲಿ. ಉಗಾದಿ, ದೀಪಾವಳಿಗೆ ಮಾತ್ರ ಹೊಸ ಬಟ್ಟೆ. ಹುಟ್ಟಿದ ಹಬ್ಬಕ್ಕೂ ಕೊಡಿಸಿಬಿಟ್ಟರೆ ಲಾಟರಿ ಹೊಡೆದಂತೆ.

ಹುಡುಗರೂ ಕೂಡ ಅರ್ಧ ಇಂಚು ಪ್ಯಾಂಟು ಮೇಲಕ್ಕೇರಿದರೂ 'ಕಾಲು ಕಾಣುತ್ತವೆ' ಎಂದು ಹಾಕಿಕೊಂಡು ಹೋಗಲು ಪೇಚಾಡುತ್ತಿದ್ದರು. ಅದು ಮತ್ತೆ ಮತ್ತೆ ಎಲ್ಲೆಂದರಲ್ಲಿ ಪಿಸುಲುವುದೋ, ಬಾಯಿಬಿಡುವುದೋ ಶುರುವಾಗಿ, ಕೋಮಾಕ್ಕೆ ಹೋಗಿ ಕೊನೆಯುಸಿರು ಎಳೆಯುವ ಸ್ಥಿತಿ ಬಂದಿದೆ ಎನ್ನುವ ಸೂಚನೆ ಸಿಗುತ್ತಿದ್ದಂತೆ ಮತ್ತೆ ದರ್ಜಿಯ ಬಳಿ ಹೋಗಿ ವಿವಿಧ ಅಳತೆಯ ಕೈಚೀಲ ಹೊಲಿಸುತ್ತಿದ್ದರು. ಆಗೆಲ್ಲ ದರ್ಜಿಗಳಿಗೆ ಹೊಸ ಬಟ್ಟೆ ಹೊಲಿಯುವುದಕ್ಕಿಂತ, ಹಳೆಯ ಬಟ್ಟೆಗಳನ್ನು ರಿಪೇರಿ ಮಾಡುತ್ತಿದ್ದ ಕೆಲಸವೇ ಹೆಚ್ಚಿತ್ತು. (ಈಗ ಬಹುತೇಕ ದರ್ಜಿಗಳು ಹಳೆಯ ಬಟ್ಟೆಯನ್ನು ತಮ್ಮ ಮಿಷಿನ್‌ಗೆ ಹಾಕಲು ಒಪ್ಪುವುದೇ ಇಲ್ಲ ಬಿಡಿ). ಇನ್ನು ಮಾಸಿದ್ದರೆ ಮನೆ ಕೆಲಸದವರಿಗೋ, ಗಿಡ್ಡ ಆದರೆ ಅವರಿಗಿಂತ ಚಿಕ್ಕವರಿಗೋ ವರ್ಗಾವಣೆಯಾಗುತ್ತಿತ್ತು. ತೇಪೆ ಹಚ್ಚಿದ್ದನ್ನು ಹಾಕುವುದಂತೂ ದೂರದ ಮಾತು. ಪಾತ್ರೆ ಮಾರುವವರೂ ಸಹ ನೂರಾರು ಪುಡಿ ಪುಕ್ಕಲು ಬಟ್ಟೆಗಳನ್ನು ಹಾಕಿದರೂ, ಪ್ಯಾಂಟು ಶರ್ಟು ಇದ್ದರೆ ಮಾತ್ರ ದೊಡ್ಡ ಪಾತ್ರೆ ಕೊಡುವುದನ್ನು ಈಗಲೂ ಅಲ್ಲಲ್ಲಿ ಕಾಣಬಹುದು.

**ಪ್ಯಾಂಟು ಶಾರ್ಟ್ ಆಗುತ್ತಾ ಅಳತೆ ಕಡಿಮೆಯಾಗಿ ಮೇಲಕ್ಕೆ ಏರಿದಂತೆಲ್ಲ ಬೆಲೆಯೂ ಹೆಚ್ಚುತ್ತಾ ಹೋಗುತ್ತದೆ. ಬ್ರ್ಯಾಂಡ್ ನೇಮ್ ಇರುವ ಹರಕಲು ಪ್ಯಾಂಟುಗಳಿಗಂತೂ ರಾಜಮರ್ಯಾದೆ. ಹೆಣ್ಣುಮಕ್ಕಳು ಪ್ಯಾಂಟು ತೊಡಲು ಶುರುಮಾಡಿದ ನಂತರ, ಅವುಗಳು ಕೊರೊನಾ ರೂಪಾಂತರಿಗಿಂತ ಹೆಚ್ಚು ರೂಪಾಂತರ ಹೊಂದುತ್ತಿವೆ.**

ಎಂಟನೆಯ ತರಗತಿಯವರೆಗೆ ಹುಡುಗರು ನಿಕ್ಕರ್ ಹಾಕುತ್ತಿದ್ದ ಕಾಲದಲ್ಲಿ, ಯಾವಾಗ ಪ್ಯಾಂಟು ಹಾಕುತ್ತೇವೆಯೋ ಎಂದು ಕನವರಿಸುತ್ತಿದ್ದರು. ಎರಡು ಪ್ಯಾಂಟು, ನಾಲ್ಕು ಶರ್ಟ್‌ನಲ್ಲೇ ನಾಲ್ಕೈದು ವರ್ಷ ಓಡಿಸುವುದಿತ್ತು. ತೀರ ಮದುವೆಗೋ, ಮುಂಜಿಗೋ ಸೂಟು, ಸಫಾರಿ ಹೊಲಿಸಿಕೊಂಡಿದ್ದರೆ ಪುಣ್ಯ. ಲಾಡಿ ಇರುತ್ತಿದ್ದ ಪಟಾಪಟ ನಿಕ್ಕರ್, ಪೈಜಾಮಗಳನ್ನಂತೂ ಅಡ್ಜಸ್ಟ್‌ಮೆಂಟ್ ಮಾಡಿಕೊಂಡು ಮನೆಯ ಗಂಡಸರೆಲ್ಲ ತೊಡುತ್ತಿದ್ದರು. ಪ್ಯಾಂಟು ತೊಡುವ ಹುಡುಗನನ್ನೇ ಮದುವೆಯಾಗಬೇಕೆಂದು ಕನಸು ಕಾಣುತ್ತಿದ್ದ ಹೆಣ್ಣುಮಕ್ಕಳೂ ಕಡಿಮೆ ಏನಿರಲಿಲ್ಲ. ಈಗ ಹುಟ್ಟಿದ ಕೂಸಿನಿಂದ ಹಿಡಿದು ಎಲ್ಲರ ಅಳತೆಯ ಪ್ಯಾಂಟುಗಳೂ ಲಭ್ಯವಿರುವಾಗ, ಮತ್ತೆ ಬರ್ಮುಡಾ ನಿಕ್ಕರ್‌ಗೆ ಮೊರೆ ಹೋಗಿರುವುದನ್ನು ನೋಡಿದರೆ ಅಚ್ಚರಿಯಾಗುತ್ತದೆ. ಅದರಲ್ಲೇ ಊರೇನು, ಕೇರಿಯೇನು, ದೇಶವನ್ನೇ ಸುತ್ತಿಬರುತ್ತಿದ್ದಾರೆ. ಹೆಣ್ಣುಮಕ್ಕಳ ನೈಟಿ, ಗಂಡುಮಕ್ಕಳ ಬರ್ಮುಡಾ ಎರಡನ್ನೂ ಬಿಡಿಸುವುದು ಸುಲಭವಲ್ಲದ ಕಾಲ. ವಸ್ತ್ರಸಂಹಿತೆ ಕೆಲವು ಸ್ಥಳಗಳಲ್ಲಿ ಪಾಲಿಸಬೇಕೆಂದು ನಿಯಮ ಮಾಡಿರುವುದು ಒಳ್ಳೆಯದು ಎನಿಸುತ್ತದೆ. ಇಲ್ಲದಿದ್ದರೆ ಶಾಲೆ, ದೇವಸ್ಥಾನ, ಕೆಲಸ ಮಾಡುವ ಸ್ಥಳಗಳಿಗೂ ಇದೇ ಬರ್ಮುಡಾ ಅವತಾರದಲ್ಲಿ ಜನ ಬರುವುದರಲ್ಲಿ ಸಂಶಯವೇ ಇಲ್ಲ.



ಜೀನ್ಸ್ ಪ್ಯಾಂಟುಗಳು ಲಗ್ಗೆ ಇಟ್ಟ ಮೇಲೆ ಪ್ಯಾಂಟಿನ ರೂಪುರೇಷೆಯೇ ಬದಲಾಗಿದೆ. ಹಾಕೋಕೂ ಕಷ್ಟ, ಬಿಚ್ಚೋಕೂ ಕಷ್ಟ, ಆದರೂ ಎಲ್ಲರಿಗೂ ಇಷ್ಟ ಎಂದರೆ ಜೀನ್ಸ್‌ಗಳೇ. ಹೆಣ್ಣು–ಗಂಡು ಎಂಬ ಭೇದಭಾವವಿಲ್ಲದೆ, ವಯಸ್ಸಿನ ಹಂಗಿಲ್ಲದೆ ಎಲ್ಲರನ್ನೂ ಸೆಳೆಯುತ್ತಿದೆ ಎನ್ನಬಹುದು. ಪದೇ ಪದೇ ಒಗೆಯುವ ತಾಪತ್ರಯ ಇಲ್ಲ, ಇಸ್ತ್ರಿ ಬೇಡುವುದಿಲ್ಲ, ಎರಡು ಮೂರು ತಿಂಗಳಿಗೊಮ್ಮೆ ಸೋಪು, ನೀರು ತೋರಿಸಿದರೆ ಸಾಕು. ಮಾಸಿದ್ದೂ ಮಾಡರ್ನೇ, ತೇಪೆ ಹಚ್ಚಿದ್ದೂ ಫ್ಯಾಷನ್ನೇ. ಹರಿದಿದ್ದರಂತೂ ಮತ್ತಷ್ಟು ಬೆಲೆ ಹೆಚ್ಚು. ಅದರಲ್ಲೂ ಹೇಗ್ಹೇಗೆ ಹರಿದಿದೆ ಎನ್ನುವುದರಲ್ಲೂ ರಿಪ್ಡ್, ಟೋರ್ನ್ಡ್, ಡಿಸ್ಟ್ರೆಸ್ಡ್ ಅಂತೆಲ ಮೂರ್ನಾಲ್ಕು ವೆರೈಟಿ ಇದೆ ಅಂತಾ ಕೇಳಿ ಮೂರ್ಛೆ ಹೋಗೋದಷ್ಟೇ ಬಾಕಿ. ಉದ್ದ, ಗಿಡ್ಡ, ಯಾಂಕಲ್ಲು, ಥ್ರೀಫೋರ್ತ್, ಸೊಂಟದ ಮೇಲೆ, ಕೆಳಗೆ ಎಲ್ಲದಕ್ಕೂ ಡಿಮ್ಯಾಂಡು.

ಮೊದಲೆಲ್ಲ ವ್ಯಾಪಾರಸ್ಥರು ಬಟ್ಟೆಗಳು ಡ್ಯಾಮೇಜ್ ಗೀಮೇಜ್ ಆಗಿತ್ತೂ ಎಂದರೆ, ಅದನ್ನು ಗಿರಾಕಿಗಳಿಗೆ ಸಾಗಹಾಕುವುದು ಹೇಗಪ್ಪಾ ಎನ್ನುವ ಚಿಂತೆಯಲ್ಲಿರುತ್ತಿದ್ದರು. ಈಗ ಜೀನ್ಸ್ ಪ್ಯಾಂಟುಗಳು ಸೇಲ್ ಆಗದಿದ್ದರೆ ಹರಿದು, ಅದಕ್ಕೆ ದುಪ್ಪಟ್ಟು ಬೆಲೆ ಇಟ್ಟು ಮಾರುತ್ತಿದ್ದಾರೆ ಎಂದು ಪತ್ರಿಕೆಯಲ್ಲಿ ಓದಿದ ನೆನಪು.

ಶಾರ್ಟ್ ಶಾರ್ಟ್ ಆಗುತ್ತಾ ಅಳತೆ ಕಡಿಮೆಯಾಗಿ ಮೇಲಕ್ಕೆ ಏರಿದಂತೆಲ್ಲ ಬೆಲೆಯೂ ಹೆಚ್ಚುತ್ತಾ ಹೋಗುತ್ತದೆ. ಬ್ರ್ಯಾಂಡ್ ನೇಮ್ ಇರುವ ಹರಕಲು ಪ್ಯಾಂಟುಗಳಿಗಂತೂ ರಾಜಮರ್ಯಾದೆ. ಮನೆ ಕಟ್ಟುವ ಗೌಂಡಿಗಳು, ಕಾರ್ಪೆಂಟರುಗಳಂತಹ ಶ್ರಮದ ಕೆಲಸ ಮಾಡುವವರು, ಕೆಲಸ ಮಾಡುವಾಗ ಹಾಕಿಕೊಳ್ಳಲು ತೇಪೆ ಹಚ್ಚಿದ, ಮಾಸಿದ, ಅಲ್ಲಲ್ಲಿ ಹರಿದ ಪ್ಯಾಂಟುಗಳನ್ನು ಹಾಕಿಕೊಂಡು, ಕೆಲಸ ಮುಗಿಯುತ್ತಿದ್ದಂತೆ ಒಳ್ಳೆಯ ಬಟ್ಟೆ ಧರಿಸಿ ಹೊರಡುವುದನ್ನು ನೋಡುವುದು ಸಾಮಾನ್ಯ ಸಂಗತಿ.

ಈಗಿನ ಯುವಜನತೆ ಮನೆಯಲ್ಲಿ ಹಿರಿಯರ ಹೆದರಿಕೆಯಿಂದಾದರೂ ಮೈತುಂಬಾ ಬಟ್ಟೆ ಹಾಕಿಕೊಳ್ಳುತ್ತಾರೇನೋ, ಆದರೆ ಹೊರಗೆ ಹೋಗುವಾಗ ಸಾವಿರಾರು ರೂಪಾಯಿ ತೆತ್ತು ಕೊಂಡ ಹರಕಲು ಪ್ಯಾಂಟೇ ಅವರ ಮೊದಲ ಆಯ್ಕೆ. ಅದ್ಯಾರೋ ಒಬ್ಬ ನಟಿ ಜೀನ್ಸ್ ಪ್ಯಾಂಟ್ ಅನ್ನು ಮೇಲುಡುಗೆಯನ್ನಾಗಿ ಮಾಡಿಕೊಂಡು ಸುದ್ದಿ ಮಾಡಿದ್ದೂ ಉಂಟು.

ಬರೀ ಗಂಡುಮಕ್ಕಳ ಉಡುಗೆಯಾಗಿದ್ದ ಪ್ಯಾಂಟುಗಳನ್ನು, ಹೆಣ್ಣುಮಕ್ಕಳು ತೊಡಲು ಶುರುಮಾಡಿದ ನಂತರ ಅವುಗಳು ಕೊರೊನಾ ರೂಪಾಂತರಿಗಿಂತ ಹೆಚ್ಚು ರೂಪಾಂತರ ಹೊಂದುತ್ತಿವೆ ಎನ್ನಬಹುದು. ಕಾಲಕ್ಕೆ ತಕ್ಕ ಹಾಗೆ ಫ್ಯಾಷನ್ನು ಬದಲಾಗುತ್ತದೆ ಎನ್ನುವುದು ಅಪ್ಪಟ ಸತ್ಯ. ಅದರಲ್ಲೂ ಬಟ್ಟೆಯ ಫ್ಯಾಷನ್ನಿನಷ್ಟು ವೇಗವಾಗಿ ಯಾವುದೂ ಬದಲಾಗದು. ಆದರೂ ನೀವೇನೇ ಹೇಳಿ, ಈ ಚಲ್ಲಣವನ್ನು ಕಂಡುಹಿಡಿದಿರುವ ಪುಣ್ಯಾತ್ಮನಿಗೊಂದು ದೊಡ್ಡ ನಮಸ್ಕಾರ ಹೇಳಲೇಬೇಕು.

ಪ್ರತಿಕ್ರಿಯಿಸಿ: feedback@sudha.co.in